# ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ.

## ಸಿಸಿ ನಂ.377/2023

ಫಿರ್ಯಾದಿಃ ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ್ ಠಾಣೆ

-ಃಃ ವಿರುದ್ದ ಃಃ-

ಆರೋಪಿ/ತರುಃ 01. ಬಸವರಾಜ ತಂದೆ ಮಾರುತಿ ಕೊಟಗಾರ,
ವಃ 41 ವರ್ಷ, ಉಃ ಕೂಲಿ ಕೆಲಸ,

02. ಸಚೀನ್ ತಂದೆ ಬಸವರಾಜ ಕೊಟಗಾರ,
ವಃ 29 ವರ್ಷ, ಉಃ ಕೂಲಿ ಕೆಲಸ,

03. ಬಸಮ್ಮಾ ಗಂಡ ಬಸವರಾಜ ಕೊಟಗಾರ,
ವಃ 38 ವರ್ಷ, ಉಃ ಕೂಲಿ ಕೆಲಸ,

ಎಲ್ಲರ ವಾಸಃ ಬಳೂರ್ಗಿ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

----

## ದೋ ಷಾ ರೋ ಪ ಣೆ

ನಾನು ಶ್ರೀ ಅನಿಲ ಅಮಾತೆ., ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕ 13.07.2022 ರಂದು ಸಾಯಂಕಾಲ 06-30 ಗಂಟೆಯ ಸುಮಾರಿಗೆ ಅಫಜಲಪೂರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಬಳೂರಗಿ ಗ್ರಾಮದಲ್ಲಿ ಫಿರ್ಯಾದಿ ಚಾಸಾ-1 ಶ್ರೀಮತಿ ಶಾಂತಾಬಾಯಿ ರವರು ತನ್ನ ತಮ್ಮನಾದ 1ನೇ ಆರೋಪಿತನ ಮನೆಯ ಹತ್ತಿರ ಹೋಗಿ 1ನೇ ಆರೋಪಿಗೆ ತಂದೆಯವರಿಗೆ ಬಹಳ ವಯಸ್ಸಾಗಿದೆ ಅವರಿಗೆ ಸರಿಯಾಗಿ ದವಾಖಾನೆ ತೋರಿಸು ನಿಷ್ಕಾಳಜಿ ಮಾಡಬೇಡ ಅಂತಾ ಅಂದಿದ್ದಕ್ಕೆ 1ನೇ ಆರೋಪಿಯಾದ ನೀವು ನಾನು ದವಾಖಾನೆಗೆ ತೋರಿಸುವುದಿಲ್ಲ ನೀನು ಏನು ಮಾಡಕೋತೀ ಮಾಡಕೋ ಅಂತ ಬೈದನು ಆಗ ಚಾಸಾ-1 ರವರು ಹೀಗೆ ಹೇಳವದು ಸರಿ ಅಲ್ಲಾ ಅಂದಿದಕ್ಕೆ ಸದರಿ ಆರೋಪಿಯಾದ ನೀವು "ರಂಡೀ ಮುಂಡೀ" ಅಂತಾ ಬೈದನು ಆಗ ಚಾಸಾ-1 ರವರು ಏರು ಧ್ವನಿಯಲ್ಲಿ ನೀನು ದವಾಖಾನೆಗೆ ತೋರಿಸದೇ ಹೋದರೆ ನಿನಗೆ ಒಳ್ಳೆಯದಾಗುವದಿಲ್ಲ ಅಂತಾ ಅಂದಿದಕ್ಕೆ 1ನೇ ಆರೋಪಿತನು ಅಲ್ಲೆ ಕುಳಿತಿದ್ದ ತನ್ನ ಮಗ 2ನೇ ಆರೋಪಿತನಿಗೆ "ಈ ರಂಡೀಗೆ ಬಿಡಬೇಡ" ಅಂತಾ ಅವಾಚ್ಯವಾಗಿ ಬೈದು, ಅವಮಾನ ಪಡಿಸಿದ್ದು, ಚಾಸಾ-1 ರವರು ಸಮಾಜದ ಶಾಂತಿಯನ್ನು ಕೆಡಿಸುವಂತೆ ಚಾಸಾ-1 ರವರನ್ನು ಉದ್ರೇಕಿಸಿದ ಕಾರಣ ಆ ಮೂಲಕ

ಆರೋಪಿತರಾದ ನೀವು ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

2. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಕೂಡಿಕೊಂಡು ಬಂದು ನಿಮ್ಮಲ್ಲಿ 2ನೇ ಆರೋಪಿಯಾದ ನೀವು ಕುಡಗೋಲಿನಿಂದ ಫಿರ್ಯಾದಿ ಚಾಸಾ-1 ಶ್ರೀಮತಿ ಶಾಂತಾಬಾಯಿ ರವರ ಎಡಗೈ ಮಣಿಕಟ್ಟಿನ ಮೇಲ್ಭಾಗ ಜೋರಾಗಿ ಹೊಡೆದು ಗಂಭೀರ ಸ್ವರೂಪದ ರಕ್ತಗಾಯವನ್ನುಂಟು ಮಾಡಿದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.326 ಸಹವಾಚಕ ಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

3. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಕೂಡಿಕೊಂಡು ಬಂದು ಆಗ ಜಗಳ ಬಿಡಿಸಲು ಬಂದ ಚಾಸಾ-6 ನಿಖಿಲ ರವರಿಗೆ 1ನೇ ಆರೋಪಿಯಾದ ನೀವು ಕೈಯಿಂದ ಬೆನ್ನಿನ ಮೇಲೆ ಗುದ್ದಿ, ಚಾಸಾ-7 ಅಖಿಲ ರವರಿಗೆ 3ನೇ ಆರೋಪಿಯಾದ ನೀವು ಕೈಯಿಂದ ಕಪಾಳದ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.323 ಸಹವಾಚಕ ಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

## ಆರೋಪಿತರ ಹೇಳಿಕೆ

ಪ್ರ:-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉ:	ಆ-1

ಆ-2

ಆ-3

ಪ್ರ:-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉ:	ಆ-1

ಆ-2

C.C No. 377/2023

ಆ-3

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕಃ 15-04-2025

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ. ಅಫಜಲಪೂರ.